ಪತ್ರಿಕಾ ತುಣುಕುಗಳು
**PAPER CLIPPINGS**

4

/ ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 7/1/2021

## ಭೂಮಿಪೂಜೆ ನೆರವೇರಿಸಿದ ಯಡಿಯೂರಪ್ಪ ವಾಗ್ದಾನ | ಮತ್ತೆ ₹100 ಕೋಟಿ

# 2 ವರ್ಷದಲ್ಲಿ ಅನುಭವ ಮಂಟಪ ಸಿದ್ಧ

7-1-2021

■ ವಿಜಯವಾಣಿ ಸುದ್ದಿಜಾಲ ಬೀದರ್/ಬಸವಕಲ್ಯಾಣ

ತ್ರಿಪುರಾಂತ ಕೆರೆ ದಡದ ನಿಸರ್ಗ ಮಡಿಲಲ್ಲಿರುವ ಹಾಲಿ ಅನುಭವ ಮಂಟಪ ಪಕ್ಕದಲ್ಲೇ ನೂತನ ಅನುಭವ ಮಂಟಪ ಕಾಮಗಾರಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬುಧವಾರ ಭೂಮಿಪೂಜೆ ನೆರವೇರಿಸಿದರು. ಮಹಾತ್ಮ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ, ಪುಷ್ಪಾರ್ಚನೆ ನಂತರ ಯಡಿಯೂರಪ್ಪ ಅವರು ಬಸವ ಸ್ಮರಣೆಯೊಂದಿಗೆ ವಿಧಿವಿಧಾನ ಪೂರೈಸಿದರು. ಇತ್ತ ಪೂಜಾ ಕೈಂಕರ್ಯ ನೆರವೇರುತ್ತಲೇ ಸಹಸ್ರಾರು ಜನರಿಂದ ಮೊಳಗಿದ ಬಸವ ಜೈಘೋಷಗಳು ಇಡೀ ಅನುಭವ ಮಂಟಪ ಪರಿಸರದಲ್ಲಿ ಮಾರ್ದನಿಸಿದವು. ಬಸವಾನುಯಾಯಿಗಳ ದಶಕದ ಕನಸು ನನಸಗೊಳಿಸುವ ಐತಿಹಾಸಿಕ ಸಂಭ್ರಮದ ಕ್ಷಣಕ್ಕೆ ಈ ಭಾಗದ ಪ್ರಮುಖ ಮಠಾಧೀಶರು, ಜನಪ್ರತಿನಿಧಿಗಳು, ಶರಣ ಸಾಹಿತಿಗಳು ಸಾಕ್ಷಿಯಾದರು.

ನಂತರ ಮಾತನಾಡಿದ ಯಡಿಯೂರಪ್ಪ, ನೂತನ ಅನುಭವ ಮಂಟಪಕ್ಕೆ ಭೂಮಿಪೂಜೆ ನೆರವೇರಿಸಿರುವುದು ನನ್ನ ಪೂರ್ವಕಾಲದ ಪುಣ್ಯದ ಭಾಗ್ಯ. ಕರ್ನಾಟಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನವಿದು. 500 ಕೋಟಿ ರೂ. ವೆಚ್ಚದ ಅನುಭವ ಮಂಟಪ ಕಾಮಗಾರಿ ಎರಡು ವರ್ಷದಲ್ಲಿ ಪೂರ್ಣಗೊಳಿಸಲಾಗುವುದು. ಎಲ್ಲರ ಅಪೇಕ್ಷೆಯಂತೆ 4-5 ಲಕ್ಷ ಜನರನ್ನು ಸೇರಿಸಿ, ಪ್ರಧಾನಿ ನರೇಂದ್ರ ಮೋದಿ ಹಸ್ತದಿಂದ ಅದ್ದೂರಿ ಉದ್ಘಾಟನೆ ನೆರವೇರಿಸಲಾಗುವುದು ಎಂದು ಘೋಷಿಸಿದರು.

ಅನುಭವ ಮಂಟಪಕ್ಕೆ ಈಗಾಗಲೇ 100 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ವಾರದೊಳಗೆ ಇನ್ನೂ 100 ಕೋಟಿ ರೂ. ಒದಗಿಸಲಾಗುವುದು. ಟೆಂಡರ್ ಕರೆದು ಶೀಘ್ರವೇ ಕಾಮಗಾರಿ ಆರಂಭಿಸಲಾಗುವುದು. ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಡಾ.ಬಸವರಾಜ ಪಾಟೀಲ್ ಸೇಡಂ ಅವರಿಗೆ ಇದರ ನಿರ್ಮಾಣದ ಸಂಪೂರ್ಣ ಜವಾಬ್ದಾರಿ ವಹಿಸಿದ್ದು, ನಿಗದಿತ ಅವಧಿಯೊಳಗೆ ಕೆಲಸ ಪೂರ್ಣಗೊಳಿಸುವ ವಿಶ್ವಾಸವಿದೆ. ಅನುಭವ ಮಂಟಪ ನಿರ್ಮಾಣ ಸೇರಿ ಬಸವಕಲ್ಯಾಣವನ್ನು ವಿಶ್ವದ ಪ್ರಮುಖ ಪ್ರವಾಸಿ ತಾಣವಾಗಿಸಲು ಸರ್ಕಾರ ಬದ್ಧವಿದೆ. ಬಸವಭೂಮಿ ಸಮಗ್ರ ವಿಕಾಸಕ್ಕೆ ಬೇಕಾದಷ್ಟು ಅನುದಾನ ಒದಗಿಸುವೆ ಎಂದು ಅಭಯ ನೀಡಿದರು. ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸಿದ್ದರು. ಡಿಸಿಎಂ ಲಕ್ಷ್ಮಣ ಸವದಿ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವ್ಹಾಣ್, ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ, ಶರಣ ಸಾಹಿತಿ ಅರವಿಂದ ಜತ್ತಿ ಮತ್ತಿತರರು ಉಪಸ್ಥಿತರಿದ್ದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಯುಕ್ತರೂ ಆದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿಶೇಷಾಧಿಕಾರಿ ಡಾ.ಮಹಾದೇವ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು.



ಬಸವಕಲ್ಯಾಣದಲ್ಲಿ ಅನುಭವ ಮಂಟಪ ಕಾಮಗಾರಿಗೆ ಬುಧವಾರ ಸಿಎಂ ಬಿ.ಎಸ್.ಯಡಿಯೂರಪ್ಪ ಭೂಮಿಪೂಜೆ ನೆರವೇರಿಸಿದರು. ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ಡಿಸಿಎಂ ಲಕ್ಷ್ಮಣ ಸವದಿ, ಸಚಿವರಾದ ಡಾ.ಸುಧಾಕರ್, ಪ್ರಭು ಚವ್ಹಾಣ್ ಇತರರಿದ್ದರು.

12ನೇ ಶತಮಾನದಲ್ಲಿ ಬಸವಾದಿ ಶರಣರು ಮಾಡಿದ ಸಾಮಾಜಿಕ ಕ್ರಾಂತಿ ಅವಿಸ್ಮರಣೀಯ. ಅನುಭವ ಮಂಟಪ ಮೂಲಕ ವಿಶ್ವಕ್ಕೆ ಮೊದಲ ಸಲ ಪ್ರಜಾಪ್ರಭುತ್ವ, ಸಂಸತ್ತಿನ ಪರಿಕಲ್ಪನೆ ಕೊಟ್ಟರು. ಗತವೈಭವದ ಪುನರುತ್ಥಾನ ಜತೆಗೆ ಮುಂದಿನ ಪೀಳಿಗೆಗೆ ಶರಣರ ಚಿಂತನೆ ತಿಳಿಸಿ ಸುಂದರ ಸಮಾಜ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕುವ ಕೆಲಸ ನೂತನ ಅನುಭವ ಮಂಟಪ ಮಾಡಲಿದೆ. ಬಸವತತ್ವ ಅನುಕರಣೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವೆನಿಸಿದೆ.

| ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ

### ನಾನು ಸಂಕಲ್ಪ ತೊಟ್ಟಿದ್ದೇ ಆಗುತ್ತೆ!

ಬಸವಕಲ್ಯಾಣ: ನಾನು ಏನಾದರೂ ಮಾಡಬೇಕೆಂಬ ಸಂಕಲ್ಪ ತೊಟ್ಟರೆ ಅದೇ ಸಾಕಾರಗೊಳ್ಳುತ್ತದೆ ಎನ್ನುವ ಮೂಲಕ ತಮ್ಮ ವಿರುದ್ಧ ಯಾರದೇ ಪಿತೂರಿ ನಡೆಯುವುದಿಲ್ಲ ಎಂದು ಸಿಎಂ ಯಡಿಯೂರಪ್ಪ ವಿರೋಧಿಗಳಿಗೆ ಪರೋಕ್ಷ ಎಚ್ಚರಿಕೆ ನೀಡಿದರು. ಸಾಧನೆಗಳು ಮಾತನಾಡಬೇಕೇ ವಿನಾ ಮಾತನಾಡುವುದೇ ಸಾಧನೆ ಆಗಬಾರದು ಎಂಬ ತತ್ವಕ್ಕೆ ಬದ್ಧನಾಗಿ ಕೆಲಸ ಮಾಡುತ್ತಿದ್ದೇನೆ. ಈ ಯಡಿಯೂರಪ್ಪ ಏನಾದರೂ ಭರವಸೆ ಕೊಟ್ಟರೆ, ಏನಾದರೂ ಮಾಡಬೇಕೆಂದು ಸಂಕಲ್ಪ ತೊಟ್ಟರೆ ಭಗವಂತನ ದಯೆ, ಬಸವಣ್ಣನವರ ಆಶೀರ್ವಾದದಿಂದ ಅದು ಪೂರ್ಣವಾಗುತ್ತಿದೆ ಎಂದರು. ಯಡಿಯೂರಪ್ಪ ವಿರುದ್ಧ ಆಗಾಗ್ಗೆ (ತಮ್ಮ ಪಕ್ಷದವರಿಂದಲೇ) ಪಿತೂರಿಗಳು ನಡೆಯುವುದು ಸಾಮಾನ್ಯ. ಇತ್ತೀಚೆಗೆ ಸಿಎಂ ಹುದ್ದೆ ವಿಷಯದಲ್ಲಿ ವಿವಿಧ ಚರ್ಚೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಅವರು ನಾನು ಸಂಕಲ್ಪ ತೊಟ್ಟಿದ್ದೇ ಆಗುತ್ತದೆ ಎಂದು ಹೇಳುವ ಮೂಲಕ ರಾಜ್ಯ ರಾಜಕಾರಣದಲ್ಲಿ ನಾನು ಇಚ್ಛಿಸಿದ್ದೇ ಆಗುತ್ತದೆ ಹಾಗೂ ಹೇಳಿದ್ದೇ ನಡೆಯುತ್ತದೆ ಎಂಬ ಸ್ಪಷ್ಟ ಸಂದೇಶ ರವಾನಿಸಿದರು.

ಆರೋಗ್ಯ ಮತ್ತು ವೈದ್ಯಕೀಯ ಇಲಾಖೆಯು 2500 ವೈದ್ಯರನ್ನು ನೇಮಕ ಮಾಡಿಕೊಳ್ಳುತ್ತಿದ್ದು, 15 ದಿನದಲ್ಲಿ ಈ ಪ್ರಕ್ರಿಯೆ ಪಾರದರ್ಶಕವಾಗಿ ಮುಗಿಯಲಿದೆ. ಈ ಹುದ್ದೆಗಳ ಭರ್ತಿ ನಂತರ ವೈದ್ಯರ ಕೊರತೆ ನೀಗಲಿದೆ.

| ಡಾ.ಕೆ.ಸುಧಾಕರ್ ಆರೋಗ್ಯ ಸಚಿವ

ಅನುಭವ ಮಂಟಪ ಮಾನವ ನಿರ್ಮಾಣದ ಕೇಂದ್ರ. ಇಂದಿನ ವ್ಯವಸ್ಥೆ ಸಾಕಷ್ಟು ಬದಲಾಗಿದೆ. ಆಚಾರ-ವಿಚಾರ ಭಿನ್ನವಾಗಿವೆ. ಇದಕ್ಕೆಲ್ಲ ಪರಿಹಾರ ಒದಗಿಸಿ ಸೂಕ್ತ ಮಾರ್ಗದರ್ಶನ ಮಾಡುವ, ಸತ್ಪ್ರಜೆಗಳನ್ನು ನಿರ್ಮಿಸುವ ಕೇಂದ್ರ ಅನುಭವ ಮಂಟಪವಾಗಲಿ.

ಗೊ.ರು. ಚನ್ನಬಸಪ್ಪ ಹಿರಿಯ ಜಾನಪದ ವಿದ್ವಾಂಸ, ಅನುಭವ ಮಂಟಪ ನಿರ್ಮಾಣ ತಜ್ಞರ ಸಮಿತಿ ಅಧ್ಯಕ್ಷ

### 125 ತಾಯಿ, ಮಕ್ಕಳ ಆಸ್ಪತ್ರೆ

ಬೀದರ್‌ನಲ್ಲಿ 100 ಹಾಸಿಗೆಯ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯನ್ನು ಲೋಕಾರ್ಪಣೆ ಗೊಳಿಸಿದ ಸಿಎಂ ಯಡಿಯೂರಪ್ಪ ಅವರು, ತಾಯಿ-ಮಕ್ಕಳ ಆರೈಕೆ ಹಾಗೂ ಆರೋಗ್ಯ ಕಾಳಜಿಗೆ ಆದ್ಯತೆ ನೀಡುವ ಸದುದ್ದೇಶದಿಂದ ಬರುವ ಐದು ವರ್ಷಗಳಲ್ಲಿ ರಾಜ್ಯಾದ್ಯಂತ 125 ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದರು.

### ಕಷ್ಟ ಕೊಟ್ಟಷ್ಟು ಗಟ್ಟಿಯಾಗ್ತಾರೆ ಬಿಎಸ್‌ವೈ!

ಸಿಎಂ ಯಡಿಯೂರಪ್ಪ ವ್ಯಕ್ತಿತ್ವ ಅಪರೂಪ. ಬದುಕಿನಲ್ಲಿ ಬಸವ ಚಿಂತನೆ ಅಳವಡಿಸಿಕೊಂಡು ನುಡಿದಂತೆ ನಡೆವ ಸ್ವಭಾವದವರು. ಸದಾ ಜನಪರ ಕಾಳಜಿ ಪ್ರದರ್ಶಿಸುವವರು. ಹೀಗಾಗಿ ವೈಯಕ್ತಿಕ ಬದುಕಿನಲ್ಲಿ ಅನೇಕ ನೋವು, ಸಂಕಷ್ಟ ಬಂದರೂ ಸಮರ್ಥವಾಗಿ ಎದುರಿಸುತ್ತಾರೆ. ಕಷ್ಟ ಕೊಟ್ಟಷ್ಟು ಅವರು ಗಟ್ಟಿಯಾಗುತ್ತಾರೆ ಎಂದು ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷರಾದ ಭಾಲ್ಕಿ ಹಿರೇಮಠದ ಹಿರಿಯ ಸ್ವಾಮೀಜಿ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ಭೂಮಿಪೂಜೆ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಯಡಿಯೂರಪ್ಪ ವ್ಯಕ್ತಿತ್ವ ಬಂಗಾರದಂತಿದೆ. ಬಂಗಾರಕ್ಕೆ ಸುಟ್ಟಷ್ಟು, ತಿಕ್ಕಿದಷ್ಟು ಫಳಫಳ ಹೊಳೆಯುತ್ತದೆ. ಹೀಗಾಗಿ ಅವರಿಗೆ ಕಷ್ಟ ಬಂದಷ್ಟು ವ್ಯಕ್ತಿತ್ವ ಹೊಳೆಯುತ್ತದೆ ಎಂದರು. ಇತ್ತೀಚೆಗೆ ಅನುಭವ ಮಂಟಪಕ್ಕೆ ವಿಜಯೇಂದ್ರ ಭೇಟಿ ನೀಡಿದ್ದರು. ಆಗ ಅನುಭವ ಮಂಟಪ ಕೆಲಸಕ್ಕೆ ಬೇಗ ಭೂಮಿ ಪೂಜೆ ನೆರವೇರಿಸಲು ತಂದೆ (ಯಡಿಯೂರಪ್ಪ) ಗಮನ ಸೆಳೆಯಲು ಕೋರಲಾಗಿತ್ತು. ಅದರಂತೆಯೇ ಬಹಳ ಬೇಗ ಕೆಲಸ ಸಾಕಾರವಾಗಿದೆ. ಇಷ್ಟು ಬೇಗ ಈ ಸಮಾರಂಭ ನಡೆದಿರುವುದಕ್ಕೆ ವಿಜಯೇಂದ್ರ ಕಾರಣರು ಎಂದರೂ ತಪ್ಪಾಗಲಾರದು. ವಿಜಯೇಂದ್ರ ಹಿಂದೆ ದೊಡ್ಡ ಯುವ ಶಕ್ತಿ ಇದೆ. ಅವರ ರಾಜಕೀಯ ಭವಿಷ್ಯ ಉಜ್ವಲವಾಗಲಿ ಎಂದು ಪೂಜ್ಯರು ಹಾರೈಸಿದರು ಶ್ರೀಗಳು ವಿಜಯೇಂದ್ರ ಅವರಿಗೆ ಹರಸಿದ ವೇಳೆ ಯಡಿಯೂರಪ್ಪ ಎರಡೂ ಕೈಮುಗಿದು ನಮಸ್ಕರಿಸಿದರು.



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ, ದಿಲ್ಲಿಯಲ್ಲಿ ನೂತನ ಸಂಸತ್ ಭವನ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಭೂಮಿ ಪೂಜೆ ನೆರವೇರಿಸಿದ್ದಾರೆ. ವಿಶ್ವಕ್ಕೆ ಸಮತೆ ಸಂದೇಶ ನೀಡಿದ ಅನುಭವ ಮಂಟಪ ನಿರ್ಮಾಣಕ್ಕೆ ಗುರು ಬಸವಣ್ಣನವರ ಚಿಂತನೆ ಅಳವಡಿಸಿಕೊಂಡ ಯಡಿಯೂರಪ್ಪ ಭೂಮಿ ಪೂಜೆ ಮಾಡಿರುವುದು ಐತಿಹಾಸಿಕ. ಇಲ್ಲಿ ಭಾಗವಹಿಸಿದವರೇ ಭಾಗ್ಯವಂತರು. ಇದು ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥ ಕ್ಷಣ.

| ಲಕ್ಷ್ಮಣ ಸವದಿ ಉಪ ಮುಖ್ಯಮಂತ್ರಿ